**"ಆದರೆ ಇದು ಸ್ವಾರ್ಥಪರತೆಯ ಶ್ರದ್ಧೆಯಲ್ಲ. ಏಕೆಂದರೆ ವೇದಾಂತ ಏಕತೆಯ ಸಿದ್ಧಾಂತ. ಅಂದರೆ ಇದರ ಪ್ರಕಾರ ಎಲ್ಲರಲ್ಲೂ ವಿಶ್ವಾಸವಿಡಬೇಕೆಂದು ಆಗುತ್ತದೆ. ಏಕೆಂದರೆ ನೀನೇ ಸರ್ವವೂ ಆಗಿರುವೆ. ಆತ್ಮಪ್ರೀತಿ ಎಂದರೆ ಎಲ್ಲರ ಮೇಲಿನ ಪ್ರೀತಿ; ಎಲ್ಲ ಪ್ರಾಣಿಗಳ ಮೇಲೂ ಪ್ರೀತಿ; ಎಲ್ಲದರ ವಿಷಯದಲ್ಲೂ ಪ್ರೀತಿ" (*ಕೃತಿಶ್ರೇಣಿ, ೨:೨೪೯*).**

ಆದರೆ, ಈ ಸುಂದರ ವಾಕ್ಯಗಳು ಅದೆಷ್ಟು ವಿರಳವಾಗಿ ಉಲ್ಲೇಖವಾಗುತ್ತವೆ! ತಮ್ಮ ಶ್ರದ್ಧೆ ಮತ್ತು ಶಕ್ತಿಯ ತತ್ತ್ವವನ್ನು ಸ್ವಂತ ವೈಭವಕ್ಕಾಗಿ ದುರುಪಯೋಗ ಮಾಡಿಕೊಳ್ಳುವುದನ್ನು ಸ್ವಾಮೀಜಿ ಎಂದಿಗೂ ಬಯಸುತ್ತಿರಲಿಲ್ಲ. ಆದರೆ, ಕೆಲವು ಶ್ರದ್ಧಾಳು ಭಕ್ತರು ಭಗವಂತನನ್ನು ಪ್ರೀತಿಸುವುದಕ್ಕೋಸ್ಕರ ತಮ್ಮನ್ನು ಅತಿ ನೀಚವೃತ್ತಿಯವರು ಎಂದುಕೊಳ್ಳುವುದನ್ನು ಉತ್ತೇಜಿಸಬಾರದು ಎನ್ನುವುದೇ ಅವರ ಇಚ್ಛೆಯಾಗಿತ್ತು. ಕೆಲವರು ತಾವು ಯಾವ ಕೆಲಸಕ್ಕೂ ಬಾರದವರು ಎಂದುಕೊಳ್ಳುವುದೇ ತಮ್ಮ ಭಕ್ತಿಯ ಸಂಕೇತವೆಂಬ ಹಾಗೂ ಅದು 'ಪರಮಾತ್ಮನ ಮಹಾನ್ ವೈಭವ'ವನ್ನು ಪ್ರಶಂಸಿಸುವ ಬಗೆಯೆಂಬ ಭಾವನೆಯನ್ನು ಬೆಳೆಸಿ ಕೊಳ್ಳುತ್ತಾರೆ. ಈ ತಪ್ಪು ಅಭಿಪ್ರಾಯವನ್ನು ತಮ್ಮದೇ ಆದ ಶೈಲಿಯಲ್ಲಿ ಖಂಡಿಸಲು ಸ್ವಾಮೀಜಿ ಬಯಸಿದರು. ಹಾಗೂ ಈ ಕಾರ್ಯದಲ್ಲಿ ಅವರಿಗೆ ಹಿಂದೂಧರ್ಮದ ಧಾರ್ಮಿಕ ಸಂಪ್ರದಾಯಗಳ ಬೆಂಬಲ ಕೂಡ ಸಿಕ್ಕಿತು. ಈ ತಮ್ಮ ಕಾರ್ಯದ ಮೂಲಕ, ದಕ್ಷಿಣ ಭಾರತದ ಆಚಾರ್ಯರು ಶತಮಾನಗಳ ಹಿಂದೆ ಬೋಧಿಸಿದ ಶಕ್ತಿದಾಯಕ ಮತ್ತು ವೀರ್ಯವತ್ತಾದ ಭಕ್ತಿವಿಧಾನವನ್ನು ಪ್ರಚುರಪಡಿಸಲೆಂದೇ ಸ್ವಾಮೀಜಿ ಪ್ರಯತ್ನಿಸಿದರು.

**ಮೂರನೆಯ ನಿಯಮವೆಂದರೆ ಎಲ್ಲ ಕೆಲಸಗಳೂ ಆರಾಧನೆಯೇ ಎನ್ನುವುದು.** ಇಲ್ಲಿ ಕೆಲಸ ಎಂದರೆ ಕರ್ಮ ಎಂದರ್ಥ. ಆದರೆ ಅವೆರಡೂ ಸಮಾನಾರ್ಥಗಳೇನಲ್ಲ. ಎಲ್ಲ ಕೆಲಸಗಳೂ ಕರ್ಮವಾಗಲಾರವು. ಒಂದು ಯಂತ್ರ ಕೆಲಸ ಮಾಡುತ್ತದೆ. ಆದರೆ ಅದು ಕರ್ಮವಲ್ಲ. ಒಬ್ಬ ಮಾನವನು ಒಂದು ನಿರ್ದಿಷ್ಟ ಉದ್ದೇಶವನ್ನು ತಲುಪಲು ಮಾಡುವ ಪ್ರಯತ್ನಕ್ಕೇ ನಾವು **ಕರ್ಮ** ಎಂಬ ಪದವನ್ನು ಅದರ ನೈಜಾರ್ಥದಲ್ಲಿ ಬಳಸಬಹುದು. ಅದರ ಮೂಲವಿರುವುದು ಅಂತರಂಗದ ಸಂವೇದನೆಯಲ್ಲಿ. ಪಿಂಡಾಂಡವು ಬ್ರಹ್ಮಾಂಡದ ಒಂದು ಭಾಗವಾಗಿರುವುದರಿಂದ, ಎಲ್ಲ ವ್ಯಕ್ತಿಗತ ಸಂವೇದನಗಳೂ ಭಾಗಗಳಾಗಿರುವ ಒಂದು ಸಾಮಾನ್ಯ ಆದ್ಯ ಜೀವಸಂವೇದನೆಯು ಇದ್ದಿರಲೇಬೇಕು. ಈ ಭಾವನೆಯನ್ನೇ ಭಗವದ್ಗೀತೆಯ **ಯತಃ ಪ್ರವೃತ್ತಿಃ ಭೂತಾನಾಂ** – ಜೀವಿಗಳ ಎಲ್ಲ ಕಾರ್ಯಚಟುವಟಿಕೆಗಳೂ ಯಾವುದರಿಂದ ಮೂಡಿಬಂದಿವೆಯೋ ಅದು ಎಂಬ ಉಕ್ತಿಯಲ್ಲಿ ಕಾಣಬಹುದಾಗಿದೆ. ಇದನ್ನು ಅರಿಸ್ಟಾಟಲನ 'ಅಚಲನಾದ ಚಾಲಕ' ಎಂಬ ದೇವರ ಬಗೆಗಿನ ವ್ಯಾಖ್ಯಾನದಲ್ಲಿ ಕೂಡ ನೋಡಬಹುದು. ಥಾಮಸ್ ಅಕ್ವಿನಾಸನು ಸ್ವಲ್ಪ ಪರಿವರ್ತನೆಗೊಳಿಸಿದ ಈ ಪರಿಕಲ್ಪನೆಯೇ ಕ್ಯಾಥೊಲಿಕ್ ದೈವಶಾಸ್ತ್ರದ ಆಧಾರಸ್ತಂಭವಾಗಿದೆ. ಈ ಆದ್ಯ ದಿವ್ಯಸಂವೇದನೆಯು ಎಲ್ಲ ಜೀವಿಗಳನ್ನೂ ಬಗೆಬಗೆಯ ಕಾರ್ಯಗಳಲ್ಲಿ ತೊಡಗುವಂತೆ ಮಾಡುತ್ತಿದೆ. ಅವರೆಲ್ಲರೂ ತಾನಾಗಿಯೇ ತಿರುಗುತ್ತಿರುವ ಯಂತ್ರದ ಮೇಲೆ ಅಳವಡಿಸಿರುವ ಬೊಂಬೆಗಳಂತೆ ಆಗಿದ್ದಾರೆ. ಈ ಆದ್ಯ ಸಂವೇದನೆಯೇ ಸಹಜ ಸಂವೇದನೆಯ ರೂಪದಲ್ಲಿ ಎಲ್ಲ ಜೀವಿಗಳ ಸರ್ವ ಕಾರ್ಯಗಳಲ್ಲಿಯೂ, ಅಭಿವ್ಯಕ್ತಿಗಳಲ್ಲಿಯೂ ಸ್ಫುರಣಗೊಂಡಿದೆ. ಮಾನವನು ಮಾತ್ರವೇ ಈ ಪ್ರಭಾವಶಾಲಿ ಯಾಂತ್ರಿಕ ಕ್ರಿಯೆಯಿಂದ ಪಾರಾಗಬಲ್ಲ. ಕರ್ಮಯೋಗವು, ಈ ಆಂತರಿಕ ಸಾಮರ್ಥ್ಯವನ್ನು ಹೇಗೆ ಕ್ರಿಯಾರೂಪಕ್ಕೆ ತರುವುದು ಎಂದು ಬೋಧಿಸುತ್ತದೆ. ಇದನ್ನು ಎರಡು ರೀತಿಗಳಲ್ಲಿ ಮಾಡಬಹುದಾಗಿದೆ: ೧. ನಿರಂತರ ನಿರಾಸಕ್ತ ಭಾವನೆಯ ಮೂಲಕ ಕರ್ಮಬಂಧನದಿಂದ ಬಿಡುಗಡೆ ಹೊಂದುವುದು; ೨. ಈ ಆದ್ಯ ಸಂವೇದನೆಯು ಉಂಟು ಮಾಡಿರುವ ಪ್ರೇರಣಾತ್ಮಕ ಶಕ್ತಿಯನ್ನು ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯುವ ಸಾಧನವನ್ನಾಗಿ ಪರಿವರ್ತಿಸಿಕೊಳ್ಳುವುದು. ಮೊದಲನೆಯದು **ಜ್ಞಾನಮಾರ್ಗ** ಮತ್ತು ಎರಡನೆಯದು **ಭಕ್ತಿಮಾರ್ಗ**. ಸ್ವಾಮಿ ವಿವೇಕಾನಂದರು ಎರಡು ಮಾರ್ಗಗಳನ್ನೂ ಬೋಧಿಸಿದ್ದಾರೆ. ಆದರೆ ಇಲ್ಲಿ ನಾವು ನಿಜವಾಗಿಯೂ ಭಕ್ತಿಯೋಗದ ಒಂದು ಭಾಗವಾದ, ಎರಡನೆಯ ಮಾರ್ಗದ ಬಗ್ಗೆ ಮಾತ್ರವೇ ಗಮನಹರಿಸಿದ್ದೇವೆ.

ಹಿಂದೆ ಉಲ್ಲೇಖಿಸಿದ ಭಗವದ್ಗೀತೆಯ ಶ್ಲೋಕವು ಹೀಗೆ ಹೇಳುತ್ತದೆ: "ಯಾರಿಂದ ಎಲ್ಲ ಬಗೆಯ ಕ್ರಿಯೆಗಳೂ ಮೂಡಿ ಬಂದಿದೆಯೋ, ಯಾವನಿಂದ ಎಲ್ಲವೂ ವ್ಯಾಪಿಸಲ್ಪಟ್ಟಿದೆಯೋ, ಅಂಥವನನ್ನು ತನ್ನ ಕ್ರಿಯೆಗಳ ಮೂಲಕ ಆರಾಧಿಸುವ ಮನುಷ್ಯನು ಪರಿಪೂರ್ಣತೆಯನ್ನು ಹೊಂದುತ್ತಾನೆ" (*ಭಗವದ್ಗೀತೆ*, ೧೮:೪೬). ಭಗವಾನ್ ಶ್ರೀಕೃಷ್ಣನು ಇಲ್ಲಿ ಬಹು ಮುಖ್ಯವಾದ ಆಧ್ಯಾತ್ಮಿಕ ನಿಯಮವನ್ನು ಜಾರಿಗೆ ತರುತ್ತಿದ್ದಾನೆ. ಸ್ವಾಮಿ ವಿವೇಕಾನಂದರು ಮಾಡಿದ ಸಾಧನೆಯೆಂದರೆ, ಇದನ್ನು ವ್ಯಕ್ತಿಗತ ಆಧ್ಯಾತ್ಮಿಕ ಜೀವನದ ಸೀಮಿತ ಸ್ತರಕ್ಕೆ ಮಾತ್ರ ಅಳವಡಿಸಿದ್ದು ಮಾತ್ರವಲ್ಲ, ಅದಕ್ಕೂ ಮಿಗಿಲಾಗಿ ಮಾನವೀಯ ಕಾರ್ಯಚಟುವಟಿಕೆಗಳ ಎಲ್ಲ ಮುಖಗಳಿಗೂ ಅದನ್ನು ವಿಸ್ತರಿಸಿದ್ದು. ಎಲ್ಲ ಜೀವಿಗಳೂ ಪರಮಾತ್ಮನ ಅಭಿವ್ಯಕ್ತಿಗಳೆಂದೂ, ಹಾಗೆಯೇ ಎಲ್ಲ ಕಾರ್ಯಗಳೂ ಏಕಮೇವ ಆದ್ಯ ಕ್ರಿಯಾಸಂವೇದನೆಯಿಂದ ಮೂಡಿಬಂದದ್ದೆಂದೂ ಸಾಕ್ಷಾತ್ಕರಿಸಿಕೊಂಡಾಗ ಮಾತ್ರ ಎಲ್ಲ ಬಗೆಯ ಕೆಲಸಗಳೂ ಭಗವಂತನ ಆರಾಧನಾರೂಪಗಳೆಂದು ಅರಿವಿಗೆ ಬರುತ್ತದೆ. ಇದು ಸರಳವೂ ಸ್ಪಷ್ಟವೂ ಆದ ಭಾವನೆಯೆಂದು ಕಂಡುಬಂದರೂ, ಇದು ಬಹಳ ಅಪಾರ್ಥಕ್ಕೆ ಒಳಗಾಗಿರುವ ಹಿಂದೂಧರ್ಮದ ತತ್ತ್ವವಾಗಿದೆ. ಈ ವಿಷಯದ ಬಗೆಗಿನ ವಾಗ್ವಿವಾದಗಳಲ್ಲಿ ಸಿಕ್ಕಿಹಾಕಿಕೊಳ್ಳದೆ, ಸ್ವಾಮಿ ವಿವೇಕಾನಂದರ ಅಮೃತವಾಣಿಯ ಕಡೆಗೆ ನಮ್ಮ ಗಮನವನ್ನು ಹರಿಸೋಣ:

**"ಪ್ರತಿಯೊಬ್ಬ ಸ್ತ್ರೀಪುರುಷನನ್ನೂ ದೇವರಂತೆ ನೋಡಿ. ನೀವು ಯಾರಿಗೂ ಸಹಾಯ ಮಾಡಲಾರಿರಿ. ಬೇಕಾದರೆ ನೀವು ಸೇವೆ ಮಾಡಬಹುದು. ನಿಮಗೆ ಆ ಭಾಗ್ಯ ಬಂದರೆ ನೀವು ಭಗವಂತನ ಮಕ್ಕಳನ್ನು ಪೂಜಿಸಬಹುದು; ಆತನನ್ನು ಪೂಜಿಸಬಹುದು. ಭಗವಂತನು ತನ್ನ ಮಕ್ಕಳ ಸೇವೆ ಮಾಡಲು ಅವಕಾಶ ಒದಗಿಸಿಕೊಟ್ಟರೆ ನೀವು ಧನ್ಯರು ಎಂದು ಭಾವಿಸಿ. ನಿಮ್ಮ ಸಮಾನರಿಲ್ಲವೆಂದು ಭಾವಿಸಬೇಡಿ. ಈ ಸದವಕಾಶ ಇತರರಿಗೆ**

ದೊರೆಯದೆ ಇರುವಾಗ ನಿಮಗೆ ದೊರೆತುದಕ್ಕೆ ನೀವೇ ಧನ್ಯರು. ಅದನ್ನು ಒಂದು ಪೂಜೆಯಂತೆ ಮಾಡಿ. ನಾವು ಬಡವರಲ್ಲಿ ದೇವರನ್ನು ನೋಡಬೇಕು. ನಮ್ಮ ಮುಕ್ತಿಗಾಗಿ ನಾವು ಅವರ ಪೂಜೆ ಮಾಡಬೇಕು. ದೀನರು, ದುಃಖಿಗಳು ನಮ್ಮ ಮೋಕ್ಷಕ್ಕಾಗಿಯೇ ಇರುವರು. ರೋಗಿಯಂತೆ, ಹುಚ್ಚನಂತೆ, ಕುಷ್ಠರೋಗಿಯಂತೆ, ಪಾಪಿಯಂತೆ ದೇವರು ಬರುವನು" (ಕೃತಿಶ್ರೇಣಿ, ೩:೧೨೪).

ಶ್ರೀರಾಮಾನುಜರು ತಮ್ಮ ಭಗವದ್ಗೀತಾಭಾಷ್ಯದಲ್ಲಿ, ವ್ಯಕ್ತಿಗತ ಜೀವಾತ್ಮವು ಪರಮಾತ್ಮನ ಶರೀರವೇ ಎಂಬ ನಿಶ್ಚಯಬುದ್ಧಿಯಿಂದಲೇ ಕರ್ಮಯೋಗವನ್ನು ಆಚರಿಸಬೇಕಾದ ಮೌಲ್ಯವನ್ನು ಒತ್ತಿಹೇಳಿದ್ದಾರೆ. ಇನ್ನಿತರ ಆಚಾರ್ಯರು ಮತ್ತು ಸಂತರು ಕೂಡ ಇದೇ ಧಾಟಿಯಲ್ಲಿಯೇ ಬೋಧಿಸಿದ್ದಾರೆ. ಆದರೆ, ಈ ಭಾವನೆಯನ್ನು ನೈತಿಕ ಮಹತಿಯನ್ನಾಗಿಯೂ, ಸಾಮಾಜಿಕ ಬಾಧ್ಯತೆಯನ್ನಾಗಿಯೂ ಮತ್ತು ವಿಶ್ವಸಾರ್ವತ್ರಿಕ ವಿಧಿಯನ್ನಾಗಿಯೂ ರೂಪುಗೊಳಿಸುವುದಕ್ಕಾಗಿಯೂ ಹಾಗೂ ಇದರಿಂದ ಸಂಗ್ರಹಿತವಾದ ಮಹಾನ್ ಶಕ್ತಿಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಆಯಾಮಗಳಿರುವ ಆಂದೋಲನಕ್ಕಾಗಿ ಬಳಸಿಕೊಳ್ಳುವುದಕ್ಕಾಗಿಯೂ ಸ್ವಾಮಿ ವಿವೇಕಾನಂದರೇ ಅವತರಿಸ ಬೇಕಾಯಿತು. ಅವರ 'ಅನುಷ್ಠಾನ ವೇದಾಂತ' ಪ್ರವಚನಗಳಲ್ಲಿ, ಲೌಕಿಕ ಮತ್ತು ಪಾರಮಾರ್ಥಿಕ, ತತ್ತ್ವ ಮತ್ತು ಧರ್ಮ, ಮಾನವ ಪ್ರೇಮ ಮತ್ತು ದೈವೀಪ್ರೇಮ – ಇವೆಲ್ಲವೂ ಮಿಳಿತವಾಗಿ ಆಧುನಿಕ ನಾಗರಿಕತೆಯ ಬೆಂಗಾಡಿನ ಬಯಲಿನಲ್ಲಿ ಹರಿದುಬರುವ ಒಂದು ಜೀವನದಿಯ ರೂಪವನ್ನು ತಾಳಿದೆ.

### ಉಪಸಂಹಾರ

ಸ್ವಾಮಿ ವಿವೇಕಾನಂದರ ಪ್ರಕಾರ ಭಕ್ತಿ ಮತ್ತು ಅವರ ಭಕ್ತಿ ಯೋಗದ ಈ ಸಂಕ್ಷಿಪ್ತ ಅಧ್ಯಯನದಲ್ಲಿ ಸ್ವಾಮೀಜಿಯವರ ಅಭಿಪ್ರಾಯಗಳನ್ನು ಸಾಂಪ್ರದಾಯಿಕ ಆಲೋಚನೆಗಳೊಡನೆ ತುಲನೆ ಮಾಡಿನೋಡುವ ಪ್ರಯತ್ನವನ್ನು ಮಾಡಲಾಗಿದೆ. ಒಟ್ಟಾರೆ ನೋಡಿದರೆ ಅವುಗಳಲ್ಲಿ ಸಾಮರಸ್ಯ ಇರುವುದು ಕಂಡುಬರುತ್ತದೆ. ವೇದಾಂತದ ಮೂಲಭೂತ ಪ್ರಮೇಯಗಳಿಗೆ ಸಂಬಂಧಿಸಿದಂತೆ ಅವರು ಸಾಂಪ್ರದಾಯಿಕರಂತೆ ಕಂಡುಬರುತ್ತಾರೆ. ಆದರೆ ಈ ತತ್ತ್ವಗಳ ವಿವರಣೆ ಮತ್ತು ಅನುಷ್ಠಾನಗಳ ವಿಷಯದಲ್ಲಿ ಆಧುನಿಕರಂತೆ ಭಾಸವಾಗುತ್ತಾರೆ. ಅವರು ಏನನ್ನು ನುಡಿದರೋ, ಮಾಡಿದರೋ ಅವೆಲ್ಲವೂ ಅವರ ಆನುಭಾವಿಕ ಅನುಭವದ ಬೆಳಕಿನಿಂದ ಬೆಳಗುತ್ತಿವೆ. ತಾವೇ ಪ್ರತ್ಯಕ್ಷವಾಗಿ ಅನುಭವಕ್ಕೆ ತಂದುಕೊಂಡ ಸಂಗತಿಯನ್ನಲ್ಲದೆ, ಬೇರೆ ಏನನ್ನೂ ಅವರು ನಂಬುತ್ತಿರಲಿಲ್ಲ. ಈ ವಿಷಯದಲ್ಲಿ ಅವರೆಂದೂ ರಾಜಿ ಮಾಡಿಕೊಳ್ಳಲಿಲ್ಲ.

ಭಕ್ತಿ ಮತ್ತು ಭಗವಂತನ ಬಗೆಗಿನ ಈ ಎಲ್ಲ ಭಾವನೆಗಳೂ ಎಲ್ಲ ಜನರಿಗೂ ರುಚಿಸುವಂಥವಲ್ಲದಿರಬಹುದು. ಸಂತ ಆಗಸ್ಟೀನನಿಗೆ ದಿವ್ಯವಾಣಿಯೊಂದು ಹೀಗೆ ಹೇಳಿತಂತೆ: "ಪ್ರಬುದ್ಧರಾದವರ ಆಹಾರ ನಾನು. ಪ್ರಬುದ್ಧನಾಗು ಮತ್ತು ನನ್ನನ್ನು ಸೇವಿಸು." ಸ್ವಾಮಿ ವಿವೇಕಾನಂದರು ಅನುಷ್ಠಾನ ಮಾಡಿ, ಬೋಧಿಸಿದ ನೈಜಭಕ್ತಿಯು ಆಧ್ಯಾತ್ಮಿಕ ಶಿಶುಗಳ ಅಬದ್ಧ ಚರ್ಯೆಯಲ್ಲ. ಅಂಥವರು ದುರ್ಬಲ ಹಾಗೂ ಅಲುಗಾಡುತ್ತಿರುವ ಶ್ರದ್ಧೆಯನ್ನು ಹೇಗೋ ಆಧಾರವಾಗಿ

> ನಾನು ಯಾರನ್ನು ಪ್ರೀತಿಸುತ್ತೇನೆಯೋ ಅದು ಕ್ಷುದ್ರವಾದ ಅಲ್ಪಮಾನವನಲ್ಲ ಎಂದು ಯಾವಾಗ ಅರಿಯುವನೋ ಆಗ ಮಾತ್ರ ಒಬ್ಬ ನಿಜವಾಗಿ ಪ್ರೀತಿಸಬಲ್ಲ. ನಾನು ಯಾರನ್ನು ಪ್ರೀತಿಸುತ್ತೇನೆಯೋ ಅದು ಕೇವಲ ಪಂಚ ಭೌತಿಕ ದೇಹವಲ್ಲ, ಅದು ಪ್ರತ್ಯಕ್ಷ ಭಗವಂತ ಎಂದು ಯಾವಾಗ ಅರಿಯುವನೋ ಆಗ ಮಾತ್ರ ಒಬ್ಬ ನಿಜವಾಗಿ ಪ್ರೀತಿಸಬಲ್ಲ. ಹಾಗೆಯೇ ಗಂಡ, ಸತಿಯೇ ದೇವರು ಎಂದು ಭಾವಿಸಿದಾಗ ಅವಳನ್ನು ಹೆಚ್ಚು ಪ್ರೀತಿಸಬಲ್ಲನು. ಮಕ್ಕಳನ್ನು ದೇವರು ಎಂದು ಭಾವಿಸಿದಾಗ ತಾಯಿ ತನ್ನ ಮಕ್ಕಳನ್ನು ಹೆಚ್ಚು ಪ್ರೀತಿಸಬಲ್ಲಳು. ಪರಮ ವೈರಿಯಲ್ಲಿಯೂ ದೇವರಿರುವನು ಎಂದು ಅರಿತಾಗ ಒಬ್ಬ ಅವನನ್ನೂ ಪ್ರೀತಿಸಬಲ್ಲನು; ಸಾಧುವಿನಲ್ಲಿ ದೇವರಿರುವನು ಎಂದು ಭಾವಿಸಿದಾಗ ಅವನನ್ನು ಪ್ರೀತಿಸುವನು; ಅಸಾಧುವಿನಲ್ಲಿ ಕೂಡ ದೇವರಿರುವನು ಎಂದು ಭಾವಿಸಿದಾಗ ಅವನನ್ನೂ ಪ್ರೀತಿಸುವನು. – *ಸ್ವಾಮಿ ವಿವೇಕಾನಂದ*

ಇಟ್ಟುಕೊಂಡು ಅಡ್ಡಾಡುತ್ತಿರುತ್ತಾರೆ. ಇದು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಪ್ರಬುದ್ಧರಾದವರು ಸೇವಿಸುವ ಪರಿಪೂರ್ಣ ಮತ್ತು ನಿಯಮಿತ ಆಹಾರಚರ್ಯೆಯಾಗಿದೆ. ಅಂಥವರು ತಮ್ಮ ಹೃದಯಗಳಲ್ಲಿ ಪೋಷಿಸಿಕೊಂಡಿರುವ ಪ್ರೇಮಾಗ್ನಿಯ ಸಲುವಾಗಿ ಎಂತಹ ಬೆಲೆಯನ್ನಾಗಲಿ ತೆರುವುದಕ್ಕೆ ಸಿದ್ಧರಾಗಿರುತ್ತಾರೆ; ಎಂತಹ ತ್ಯಾಗ ವನ್ನಾದರೂ ಮಾಡುವುದಕ್ಕೆ ಸನ್ನದ್ಧರಾಗಿರುತ್ತಾರೆ; ಎಂತಹ ಸಂಕಷ್ಟ ವನ್ನಾಗಲಿ ಅನುಭವಿಸುವುದಕ್ಕೆ ತಯಾರಾಗಿರುತ್ತಾರೆ. ಸಾಧಾರಣ ಮಾನವಪ್ರೇಮವನ್ನು ಕುರಿತು ಪ್ರಸಿದ್ಧ ಮನಃಶಾಸ್ತ್ರಜ್ಞರಾದ ಎರಿಕ್ ಫ್ರಾಮ್ ಅವರು ತಮ್ಮ *Art of Loving* ಎಂಬ ಪುಸ್ತಕದ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ:

"... ಪ್ರೇಮವೆಂಬುದು, ಒಬ್ಬ ವ್ಯಕ್ತಿ ಎಷ್ಟೇ ಪ್ರಬುದ್ಧನಾಗಿದ್ದರೂ, ಯಾರು ಬೇಕಾದರೂ ಸುಲಭವಾಗಿ ನಿರತರಾಗಿ ಇರಬಲ್ಲ ಭಾವನೆಯಲ್ಲ. ಓದುಗನು ಈ ಬಗೆಯ ನಿಶ್ಚಯಕ್ಕೆ ಬರುವುದನ್ನು ಈ ಪುಸ್ತಕವು ಇಚ್ಛಿಸುತ್ತದೆ: ಸರ್ವಾಂಗೀಣ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಪ್ರಯತ್ನಿಸದೆಯೇ, ಸೃಜನಾತ್ಮಕ ದೃಷ್ಟಿಕೋನವನ್ನು ಸಿದ್ಧಿಸಿಕೊಳ್ಳುವ ಸಲುವಾಗಿ ಅವನು ಪ್ರೀತಿಯನ್ನು ಬೆಳೆಸಿಕೊಳ್ಳಲು ಮಾಡುವ ಎಲ್ಲ ಪ್ರಯತ್ನಗಳೂ ವಿಫಲವಾಗುತ್ತವೆ. ವ್ಯಕ್ತಿಗತವಾದ ಪ್ರೀತಿಯಲ್ಲಿನ ಸಮಾಧಾನವು ತನ್ನ ಸಹಚರನನ್ನು ಪ್ರೀತಿಸುವ ಸಾಮರ್ಥ್ಯದ ವಿನಾ ಏನನ್ನೂ ಗಳಿಸಿಕೊಳ್ಳಲು ಅಶಕ್ಯವಾದುದು. ಅಂತಹ ತೃಪ್ತಿಯ ಭಾವನೆ ಕೂಡ ನೈಜ ವಿನೀತ ಭಾವನೆ, ಧೈರ್ಯ, ಶ್ರದ್ಧೆ ಮತ್ತು ಶಿಸ್ತುಗಳಿಲ್ಲದೆ ಒದಗಿಬರುವುದಿಲ್ಲ."

ಇದು ಸಾಧಾರಣ ಮಾನವಪ್ರೇಮದ ಬಗ್ಗೆಯೇ ಸಂಗತವಾದರೆ, ನೈಜಭಕ್ತಿಯ ವಿಷಯದಲ್ಲಿ ಅದೆಷ್ಟು ಪ್ರಸ್ತುತವಾಗಿರಬೇಕು? ಅಂತಹ ಭಕ್ತಿಯು ನಮ್ಮ ಅಭ್ಯಾಸಗಳ ಮತ್ತು ಸಹಜ ಪ್ರವೃತ್ತಿಗಳ ಸೆರೆಮನೆಯ ಗೋಡೆಗಳನ್ನು, ಅಹಂಕಾರವೆಂಬ ಮಾಳಿಗೆಯ ತೊಲೆಯನ್ನು ವಿನಾಶ ಮಾಡುವಂತೆ ಆಗ್ರಹಪಡಿಸುತ್ತದೆ. ಹೀಗಾದಾಗ, ಜ್ಯೋತಿರ್ಮಯ ಜೀವಾತ್ಮವು ಎಲ್ಲ ಜೀವಿಗಳ ಆತ್ಮಸ್ವರೂಪವಾದ, ಸರ್ವವ್ಯಾಪಿಯಾದ ಪರಮಚೈತನ್ಯದ ಅಪ್ಪುಗೆಯಲ್ಲಿ ತನ್ನನ್ನೇ ತಾನು ಮರೆತುಬಿಡುತ್ತದೆ!

# ವೇದಾಂತ ಮತ್ತು ರಾಮಕೃಷ್ಣ ವಿವೇಕಾನಂದ ದರ್ಶನ

ಸ್ವಾಮಿ ನಿತ್ಯಸ್ಥಾನಂದ

*(ಹಿಂದಿನ ಸಂಚಿಕೆಯಿಂದ)*

ಆತ್ಮ ಅರಿವಿಗೆ ಮೀರಿದುದು ಎಂದು ಉಪನಿಷತ್ತುಗಳು ಸಾರುತ್ತವೆ. – **ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ** – "ಅದನ್ನು ಪಡೆಯಲಾಗದೆ ಮಾತು ಮನಸ್ಸಿನೊಂದಿಗೆ ಹಿಂತಿರುಗುತ್ತದೆ" ಎಂದು ತೈತ್ತಿರೀಯ ಉಪನಿಷತ್ತು ಹೇಳುತ್ತದೆ. ಕೇನೋಪನಿಷತ್ತಿನಲ್ಲಿ ಈ ಮಾತು ಬರುತ್ತದೆ :

**ನ ತತ್ರ ಚಕ್ಷುರ್ಗಚ್ಛತಿ ನ ವಾಕ್ ಗಚ್ಛತಿ ನೋ ಮನಃ ।**
**ನ ವಿದ್ಮೋ ನ ವಿಜಾನೀಮಃ ಯಥೈತದನುಶಿಷ್ಯಾತ್ ॥** (೩)

"ಅಲ್ಲಿಗೆ ಕಣ್ಣು (ಇಂದ್ರಿಯಗಳು) ಹೋಗುವುದಿಲ್ಲ, ಮಾತಿಗೆ ಅದು ನಿಲುಕುವುದಿಲ್ಲ ಮತ್ತು ಮನಸ್ಸು ಕೂಡ ಅದನ್ನು ಕಲ್ಪಿಸಿಕೊಳ್ಳಲಾರದು. ಹಾಗಿರುವಾಗ ಅದನ್ನು ತಿಳಿಯುವುದು ಹೇಗೆ? ಇತರರಿಗೆ ತಿಳಿಸಿಕೊಡುವುದಾದರೂ ಹೇಗೆ?" ಇಂತಹ ಅನೇಕ ಹೇಳಿಕೆಗಳು ಉಪನಿಷತ್ತು ಮತ್ತು ಇತರ ಶಾಸ್ತ್ರಗಳಲ್ಲಿ ಕಂಡುಬರುತ್ತವೆ.

ಜಾತಿ, ಗುಣ, ಕ್ರಿಯೆಗಳ ಮೂಲಕ ನಾವು ವಸ್ತುಗಳನ್ನು ಅರಿಯುತ್ತೇವೆ. ಯಾವುದೋ ಪ್ರಾಣಿಯನ್ನು ನೋಡಿದಾಗ ಅದು ಹಸುವಿನ ಅಥವಾ ನಾಯಿಯ ಜಾತಿ ಅಥವಾ ಇನ್ನಾವುದೋ ವರ್ಗಕ್ಕೆ ಸೇರಿದುದು ಎಂದು ಗುರುತಿಸುತ್ತೇವೆ. ಇನ್ನಾವುದೊ ವಸ್ತುವನ್ನು ನೋಡಿದಾಗ ಇದು ಮೇಜು ಅಥವಾ ಕುರ್ಚಿಯ ವರ್ಗಕ್ಕೆ ಸೇರಿದುದು ಎಂದು ಗುರುತಿಸುತ್ತೇವೆ. ಹೀಗೆ ಜಾತಿ ಲಕ್ಷಣಗಳ ಆಧಾರದ ಮೇಲೆ ನಾವು ವಸ್ತುಗಳನ್ನು ಗುರುತಿಸುವುದು ವಾಡಿಕೆ. ಹೀಗೆಯೇ ಒಂದು ವಸ್ತುವನ್ನು ಅಥವಾ ಪ್ರಾಣಿಯನ್ನು ಅದರ ವಿಶಿಷ್ಟ ಗುಣಗಳ ಮೂಲಕ ಗುರುತಿಸುತ್ತೇವೆ. ಪ್ರತಿಯೊಂದು ವಸ್ತು ಅಥವಾ ಪ್ರಾಣಿಗೆ, ಜಾತಿ ಲಕ್ಷಣಗಳಲ್ಲದೆ, ಅದರದೇ ಆದ ಕೆಲವು ವಿಶಿಷ್ಟ ಗುಣಗಳಿರುತ್ತವೆ. ಹೀಗೆ ಸಾಮಾನ್ಯ ಮತ್ತು ವಿಶೇಷ ಲಕ್ಷಣಗಳ ಮೂಲಕ ನಾವು ಇಂದ್ರಿಯವಿಷಯಗಳನ್ನು ಒಂದರಿಂದ ಇನ್ನೊಂದನ್ನು ಪ್ರತ್ಯೇಕಿಸಿ ನೋಡುತ್ತೇವೆ. ಒಂದು ವಿಷಯವನ್ನು ಗುರುತಿಸುವುದೆಂದರೆ ಅದನ್ನು ಇತರೆಲ್ಲದರಿಂದ ಪ್ರತ್ಯೇಕಿಸುವುದೇ ಆಗಿದೆ. ಹಾಗೆಯೇ ಕ್ರಿಯೆಗಳ ಮೂಲಕವೂ ನಾವು ವಸ್ತುಗಳನ್ನು ಪ್ರತ್ಯೇಕಿಸಿ ವರ್ಗೀಕರಿಸುತ್ತೇವೆ.

ಆದರೆ ಆತ್ಮವು ಜಾತಿ ಗುಣ ಕ್ರಿಯೆಗಳಿಲ್ಲದುದು. ಇವುಗಳಿದ್ದಿದ್ದರೆ ಆತ್ಮ ಕೂಡ ಒಂದು ಭೌತವಸ್ತುವೇ ಆಗಿಬಿಡುತ್ತಿತ್ತು, ಅದು ಚೈತನ್ಯಸ್ವರೂಪ ಎಂದು ಹೇಳಲಾಗುತ್ತಿರಲಿಲ್ಲ. ಅದು ಇವುಗಳನ್ನು ಮೀರಿರುವುದರಿಂದ ಅವಾಙ್ಮನಸಗೋಚರವಾದುದು. ಈ ವಿಷಯದಲ್ಲಿ ಶ್ರೀಶಂಕರಾಚಾರ್ಯರು ಉಪನಿಷತ್ತಿನ ಒಂದು ಕಥೆಯನ್ನು ಉದಾಹರಿಸುತ್ತಾರೆ : ಒಬ್ಬ ಶಿಷ್ಯನು ಗುರುವಿನ ಹತ್ತಿರ ಹೋಗಿ ತನಗೆ ಆತ್ಮನ ಬಗ್ಗೆ ತಿಳಿಸಿಕೊಡಬೇಕೆಂದು ಕೇಳಿಕೊಳ್ಳುತ್ತಾನೆ. ಗುರುವು ಏನೂ ಉತ್ತರಿಸದೆ ಸುಮ್ಮನೆ ಕುಳಿತಿರುತ್ತಾನೆ. ಎರಡು ಮೂರು ಬಾರಿ ಕೇಳಿದಾಗಲೂ ಯಾವ ಉತ್ತರವೂ ಇಲ್ಲ. ಆಗ ಶಿಷ್ಯನು, "ನಾನು ಎಷ್ಟು ಬಾರಿ ಕೇಳಿದರೂ ನೀವು ಉತ್ತರಿಸುತ್ತಲೇ ಇಲ್ಲವಲ್ಲ" ಎಂದು ಆಕ್ಷೇಪಿಸಿದಾಗ ಗುರು ಹೀಗೆ ಹೇಳುತ್ತಾನೆ : "ನಾನು ಉತ್ತರಿಸುತ್ತಿದ್ದೇನೆ, ನೀನು ಅರ್ಥಮಾಡಿಕೊಳ್ಳುತ್ತಿಲ್ಲ, 'ಮೌನವೇ ಆತ್ಮಾ' (**ಉಪಶಾಂತೋsಯಮಾತ್ಮಾ**)." ಶ್ರೀರಾಮಕೃಷ್ಣರು ಈ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಕಥೆಯನ್ನು ಹೇಳುತ್ತಾರೆ: ಒಬ್ಬ ತಂದೆಯ ಇಬ್ಬರು ಮಕ್ಕಳು ಶಾಸ್ತ್ರಾಧ್ಯಯನಕ್ಕಾಗಿ ಒಬ್ಬ ಗುರುವಿನ ಹತ್ತಿರ ಹೋಗುತ್ತಾರೆ. ಅನೇಕ ವರ್ಷಗಳ ನಂತರ ಸಕಲ ಶಾಸ್ತ್ರ ಪಾರಂಗತರಾಗಿ ಮನೆಗೆ ಹಿಂದಿರುಗಿದಾಗ ತಂದೆಯು ಆತ್ಮನ ವಿಚಾರವಾಗಿ ಅವರನ್ನು ಪ್ರಶ್ನಿಸುತ್ತಾನೆ. ಹಿರಿಯ ಮಗನು ತನ್ನ ಎಲ್ಲ ಪಾಂಡಿತ್ಯವನ್ನೂ ಪ್ರದರ್ಶಿಸುತ್ತ ಆತ್ಮನ ಬಗ್ಗೆ ಬಗೆಬಗೆಯಾಗಿ ವಿವರಣೆ ನೀಡುತ್ತಾನೆ. ಆದರೆ ಕಿರಿಯವನು ಏನೂ ಮಾತನಾಡದೆ ತಲೆಬಾಗಿ ನಿಂತುಬಿಟ್ಟನು. ತಂದೆ ಆಗ ಸಂತೋಷದಿಂದ, "ನೀನು ನಿಜವಾಗಿ ಆತ್ಮನನ್ನು ಅರಿತಿರುವೆ" ಎಂದು ಅವನನ್ನು ಪ್ರಶಂಸಿಸುತ್ತಾನೆ.

> **ಕಣ್ಣಿದೆ ಎಂಬುದನ್ನು ಕಣ್ಣಿನ ಪರಿಣಾಮದ ಮೂಲಕವಾಗಿ ಅಲ್ಲದೆ ಬೇರೆ ರೀತಿಯಲ್ಲಿ ತಿಳಿದುಕೊಳ್ಳುವುದಕ್ಕೆ ಹೇಗೆ ಆಗುವುದಿಲ್ಲವೋ ಹಾಗೆಯೇ ಆತ್ಮನನ್ನು ಕೂಡ ಅದರ ಪರಿಣಾಮದ ಮೂಲಕವಾಗಿ ಅಲ್ಲದೆ, ಅದನ್ನೇ ನಾವು ಪ್ರತ್ಯಕ್ಷವಾಗಿ ನೋಡಲಾಗುವುದಿಲ್ಲ. ಅದನ್ನು ನಮಗೆ ಕಾಣುವಂತೆ ಮಾಡುವ ಅಧೋಸ್ಥಿತಿಗೆ ಆತ್ಮನನ್ನು ನಾವು ತರಲಾರೆವು. ಪ್ರಪಂಚದಲ್ಲಿ ಇದೊಂದೇ ನಿರುಪಾಧಿಕ; ಉಳಿದೆಲ್ಲವೂ ಸೋಪಾಧಿಕ.**
>
> –*ಸ್ವಾಮಿ ವಿವೇಕಾನಂದ*

ಕೇನೋಪನಿಷತ್ತು, **ಅನ್ಯದೇವ ತದ್ವಿದಿತಾದ್ ಅವಿಧಿತಾದಧಿ**– "ಆತ್ಮನು ತಿಳಿದಿರುವುದು, ತಿಳಿಯದಿರುವುದು, ಇವೆರಡರಿಂದಲೂ ಬೇರೆಯಾದವನು" (ಕೇನೋಪನಿಷದ್, ೧.೪) ಎಂದು ಹೇಳುತ್ತದೆ. ಜಾತಿ ಗುಣ ಕ್ರಿಯೆಗಳು ಆತ್ಮನಲ್ಲಿ ಇಲ್ಲದೇ ಇರುವುದರಿಂದ, ತಿಳಿದಿರುವುದಕ್ಕಿಂತ ಅದು ಬೇರೆಯಾದುದು. ಆದರೆ ಆತ್ಮವು ತಿಳಿಯದಿರುವುದಕ್ಕಿಂತಲೂ ಬೇರೆಯಾದುದು, ಏಕೆಂದರೆ ಅದು ಅನುಭವಗಮ್ಯವಾದುದು; 'ನಾನು' ಎಂಬ ಭಾವದ ಮೂಲಕ ಅದು ಎಲ್ಲರ ಅರಿವಿಗೂ ಬರುತ್ತದೆ. ದಕ್ಷಿಣಾಮೂರ್ತಿ ಸ್ತೋತ್ರದಲ್ಲಿ ಶ್ರೀಶಂಕರಾಚಾರ್ಯರು ಇದನ್ನೇ ಹೀಗೆ ವಿಶದೀಕರಿಸುತ್ತಾರೆ:

ಬಾಲ್ಯಾದಿಷ್ವಪಿ ಜಾಗ್ರದಾದಿಷು ತಥಾ ಸರ್ವಾಸ್ವವಸ್ಥಾಸ್ವಪಿ
ವ್ಯಾವೃತ್ತಾಸ್ವನುವರ್ತಮಾನಮಹಮಿತ್ಯಂತಸ್ಫುರಂತಂ ಸದಾ ।
ಸ್ವಾತ್ಮಾನಂ ಪ್ರಕಟೀಕರೋತಿ ಭಜತಾಂ
ಯೋ ಮುದ್ರಯಾ ಭದ್ರಯಾ
ತಸ್ಮೈ ಶ್ರೀಗುರುಮೂರ್ತಯೇ
ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ (೭)

"ಬಾಲ್ಯ ಯೌವನ ಮುಪ್ಪುಗಳು, ಜಾಗ್ರತ್ ಸ್ವಪ್ನ ನಿದ್ರಾದಿಗಳು ಮತ್ತು ಇತರ ಎಲ್ಲ ಅವಸ್ಥೆಗಳು ಬಂದುಹೋದರೂ, ನಿತ್ಯವಾಗಿ ಉಳಿದುಕೊಂಡಿರುವ ಮತ್ತು 'ನಾನು' ಎಂದು ಅಂತರಂಗದಲ್ಲಿ ಸದಾ ಪ್ರಕಾಶಿಸುತ್ತಿರುವ ಆತ್ಮನನ್ನು ಯಾವಾತನು ತನ್ನ ಮಂಗಳವಾದ ಮುದ್ರೆಯಿಂದ ಶಿಷ್ಯರಿಗೆ ಪ್ರಕಟಿಸುವನೊ ಅಂತಹ ಶ್ರೀಗುರುರೂಪಧಾರಿಯಾದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ."

ನಾವು ಯಾವುದೇ ವಿಷಯವನ್ನೂ ಇಲ್ಲವೆಂದು ನಿರಾಕರಿಸಬಹುದು. ಬೌದ್ಧಶೂನ್ಯವಾದಿಗಳು ಎಲ್ಲ ಬಗೆಯ ಸತ್ಯವನ್ನೂ ನಿರಾಕರಿಸುತ್ತಾರೆ. ಅವರ ಪಾಲಿಗೆ ಕೇವಲ ಬದಲಾವಣೆಯೊಂದೇ ಇರುವಂತಹದು, ಅದರ ಹಿಂದೆ ಯಾವ ಸತ್ಯವೂ ಇಲ್ಲ. ನಿರ್ವಾಣವೆಂದರೆ, ದೀಪ ಆರಿಹೋದಂತೆ, ಇಲ್ಲವಾಗುವುದು. ಶ್ರೀಶಂಕರಾಚಾರ್ಯರು ಇದನ್ನು ಒಪ್ಪುವುದಿಲ್ಲ. **ಸರ್ವಬುದ್ಧೀನಾಂ ಮೃಷಾತ್ವೇ ಅಸತ್ಯಬುದ್ಧಿರಪಿ ಅನುಪಪತ್ತೇಃ** – "ಎಲ್ಲವನ್ನೂ ನಿರಾಕರಿಸಿದರೆ, ಆ ನಿರಾಕರಣಬುದ್ಧಿಯನ್ನೂ ನಿರಾಕರಿಸಬೇಕಾಗುತ್ತದೆ" (ಬೃಹದಾರಣ್ಯಕೋಪನಿಷತ್ ಭಾಷ್ಯ, ೧.೨.೧) ಎಂದು ಅವರು ಹೇಳುತ್ತಾರೆ. ಆದ್ದರಿಂದ ಅವರ ಪ್ರಕಾರ ಯಾವುದೋ ಒಂದು ಭಾವವಸ್ತು ಇರಲೇಬೇಕು. ಇದನ್ನು 'ವಿವೇಕಚೂಡಾಮಣಿ'ಯಲ್ಲಿ ಅವರೇ ಹೀಗೆ ಹೇಳುತ್ತಾರೆ:

ಅಸ್ತಿ ಕಶ್ಚಿತ್ ಸ್ವಯಂ ನಿತ್ಯಂ ಅಹಂ ಪ್ರತ್ಯಯಲಂಬನಃ ।
ಅವಸ್ಥಾತ್ರಯಸಾಕ್ಷೀ ಸನ್ ಪಂಚಕೋಶವಿಲಕ್ಷಣಃ ॥
(೧೨೫)

" 'ನಾನು' ಎಂಬ ಪ್ರಜ್ಞೆಗೆ ಆಶ್ರಯವಾಗಿರುವ, ತಾನೇ ತಾನಾಗಿರುವ, ನಿತ್ಯವಾಗಿರುವ, ಅವಸ್ಥಾತ್ರಯಕ್ಕೆ ಸಾಕ್ಷಿಯಾಗಿರುವ ಮತ್ತು ಪಂಚಕೋಶಗಳಿಂದ ಬೇರೆಯಾಗಿರುವ ಯಾವದೋ ಒಂದು ಸತ್ಯ ಇದ್ದೇ ಇದೆ."

ಎಲ್ಲ ಕೋಶಗಳ, ಎಲ್ಲ ಅವಸ್ಥೆಗಳ ಸಾಕ್ಷಿಯಾಗಿ ಆತ್ಮನು ಬೆಳಗುತ್ತಿರುವನು. 'ದೃಗ್–ದೃಶ್ಯ–ವಿವೇಕ'ದ ಮೊದಲನೆಯ ಶ್ಲೋಕವು ವಿಶ್ಲೇಷಣಾತ್ಮಕವಾಗಿ ಇದನ್ನು ಹೀಗೆ ವಿವರಿಸುತ್ತದೆ:

ರೂಪಂ ದೃಶ್ಯಂ ಲೋಚನಂ ದೃಕ್
ತದ್ದೃಶ್ಯಂ ದೃಕ್ ತು ಮಾನಸಂ।
ದೃಶ್ಯಾ ಧೀವೃತ್ತಯಃ ಸಾಕ್ಷೀ
ದೃಗೇವ ನ ತು ದೃಶ್ಯತೇ॥ (೧)

"ಹೊರಗಿನ ರೂಪಗಳು ದೃಶ್ಯವಾದರೆ (ವಿಷಯ) ಕಣ್ಣು ಅವನ್ನು ನೋಡುವ ದೃಕ್ (ವಿಷಯಿ). ಅದೇ ಕಣ್ಣು ಮನಸ್ಸುಗಳಿಗೆ ವಿಷಯವಾಗುತ್ತದೆ (ಮನಸ್ಸಿನ ಮೂಲಕ ಕಣ್ಣನ್ನು ಕಲ್ಪಿಸಿಕೊಳ್ಳಬಹುದು). ಮನಸ್ಸಿನ ವೃತ್ತಿಗಳು ಸಾಕ್ಷಿಗೆ ವಿಷಯವಾಗುತ್ತವೆ. ಆದರೆ ಆ ಸಾಕ್ಷಿಯು ಯಾವಾಗಲೂ ವಿಷಯಿಯೇ, ಅದು ವಿಷಯವಾಗುವುದೇ ಇಲ್ಲ."

**ವಿಜ್ಞಾತಾರಮ್ ಅರೇ ಕೇನ ವಿಜಾನೀಯಾತ್** – "ತಿಳಿಯುವವನನ್ನೇ ತಿಳಿಯುವುದು ಹೇಗೆ?" ಎಂದು ಬೃಹದಾರಣ್ಯಕ ಉಪನಿಷತ್ತು ಪ್ರಶ್ನಿಸುತ್ತದೆ. ಒಂದು ಬೆರಳಿನ ತುದಿಯನ್ನು ಅದೇ ಬೆರಳಿನಿಂದ ಮುಟ್ಟಲಾಗದೇ ಇರುವಂತೆ ಆತ್ಮನನ್ನೂ ಜ್ಞಾನವಿಷಯವಾಗಿ ತಿಳಿಯಲಾಗುವುದಿಲ್ಲ.

ಆದರೆ, ಅಂತಃಸಾಕ್ಷಿಯಾಗಿ ಆತ್ಮನು ಎಲ್ಲರ ಅರಿವಿಗೆ ಬರುತ್ತಿರುವನು. ಆತ್ಮನ ಅರಿವಿಲ್ಲದೆ ಯಾವುದನ್ನೂ ಅರಿಯಲಾಗುವುದಿಲ್ಲ. ಮೊದಲು 'ನಾನು' ಎಂಬುದು ಇರಬೇಕು, ಅನಂತರ ಎಲ್ಲವೂ. ಈ ಬಗ್ಗೆ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: "ಜ್ಞಾತೃ ತನ್ನನ್ನು ತಾನೇ ಅರಿಯಲಾರನು. ನಾನು ಎಲ್ಲವನ್ನೂ ನೋಡುತ್ತೇನೆ. ಆದರೆ ನನ್ನನ್ನು ನಾನು ನೋಡಲಾರೆ. ಆತ್ಮ ಜ್ಞಾತೃ; ಸರ್ವೇಶ್ವರನಾದ, ನಿತ್ಯಸತ್ಯನಾದ ಅವನೇ ಈ ಪ್ರಪಂಚದ ದೃಶ್ಯಗಳಿಗೆಲ್ಲ ಕಾರಣ. ಆದರೆ ಪ್ರತಿಬಿಂಬದ ವಿನಃ ಅವನು ತನ್ನನ್ನು ತಾನೇ ನೋಡಲಾರ, ಅರಿತುಕೊಳ್ಳಲಾರ. ನೀವು ಕನ್ನಡಿಯಲ್ಲಿ ಅಲ್ಲದೆ ಬೇರೆ ಎಲ್ಲೂ ನಿಮ್ಮ ಮುಖವನ್ನು ನೋಡಿಕೊಳ್ಳಲಾರಿರಿ. ಆತ್ಮನೂ ತಾನು ಪ್ರತಿಬಿಂಬಿತವಾಗದೆ ಇದ್ದರೆ ತನ್ನನ್ನು ತಾನು ಅರಿಯಲಾರನು. ಆದಕಾರಣ ಈ ವಿಶ್ವವೆಲ್ಲ ತನ್ನನ್ನು ತಾನು ಅರಿಯಲು ಪ್ರಯತ್ನಿಸುತ್ತಿರುವ ಆತ್ಮವೇ ಆಗಿದೆ. ಈ ಪ್ರತಿಬಿಂಬ ಮೊದಲು ಪ್ರೋಟೋಪ್ಲಾಸಂನಲ್ಲಿ ಕಾಣುವುದು. ಅನಂತರ ಗಿಡ ಮರ ಪ್ರಾಣಿಗಳು ಇವುಗಳಲ್ಲಿ. ಹೀಗೆ ಕೊನೆಗೆ ಪೂರ್ಣಾತ್ಮನೆಂಬ ಶ್ರೇಷ್ಠ ಪ್ರತಿಬಿಂಬವನ್ನು ಮುಟ್ಟುವವರೆಗೆ ಇದು ಮುಂದುವರಿಯುತ್ತ, ಉತ್ತಮ ಉತ್ತಮತರ ಪ್ರತಿಬಿಂಬಗಳನ್ನು ಹೊರಗೆಡಹುತ್ತ ಹೋಗುವುದು. ಒಬ್ಬನು ತನ್ನ ಪ್ರತಿಬಿಂಬವನ್ನು ಮೊದಲು ಬಗ್ಗಡದ ನೀರಿರುವ ಗುಂಡಿಯಲ್ಲಿ ನೋಡಿದಂತೆ ಇರುವುದು. ಅಲ್ಲಿ ಕೇವಲ ಅವನ ರೂಪುರೇಖೆ ಮಾತ್ರ ಕಾಣುತ್ತದೆ. ಅನಂತರ ಶುಭ್ರವಾದ ನೀರಿಗೆ ಬಂದರೆ ಅಲ್ಲಿ ಶುಭ್ರವಾದ ಪ್ರತಿಬಿಂಬವನ್ನು ಅವನು ಕಾಣುತ್ತಾನೆ. ಅನಂತರ ಹೊಳೆಯುತ್ತಿರುವ ಲೋಹದಲ್ಲಿ ನೋಡಿದಾಗ ಅವನ ಪ್ರತಿಬಿಂಬ ಇನ್ನೂ ಸ್ಪಷ್ಟವಾಗುತ್ತದೆ. ಕೊನೆಯಲ್ಲಿ ಕನ್ನಡಿಯಲ್ಲಿ ನೋಡಿದಾಗ ತಾನು ನಿಜವಾಗಿ ಹೇಗೆ ಇರುವನೊ ಹಾಗೆಯೇ ಅವನು ಕಾಣುತ್ತಾನೆ" (ಕೃತಿಶ್ರೇಣಿ, ೬:೨೫೨).

ದೀಪವು ಎಲ್ಲವನ್ನೂ ಬೆಳಗುತ್ತದೆ, ಆದರೆ ಅದನ್ನು ಬೆಳಗುವುದಕ್ಕೆ ಯಾವ ದೀಪವೂ ಬೇಕಾಗುವುದಿಲ್ಲ. ಹಾಗೆಯೇ ಆತ್ಮನು ಎಲ್ಲವನ್ನೂ ಅರಿಯುತ್ತಾನೆ ಮತ್ತು ಅದರ ಮೂಲಕ ತನ್ನನ್ನು ತಾನೇ ಅರಿಯುತ್ತಾನೆ – ಜ್ಞಾನವಸ್ತುವಾಗಿ ಅಲ್ಲ, ಸ್ವ–ಪ್ರಜ್ಞೆಯಾಗಿ. ಆತ್ಮನು ಸಾಕ್ಷಿಯಾಗಿ ಎಲ್ಲವನ್ನೂ ಬೆಳಗುತ್ತಿರುವನು ಎಂಬುದನ್ನು ಸೂಕ್ತವಾದ ಒಂದು ರೂಪಕದ ಮೂಲಕ 'ಪಂಚದಶಿ'ಯಲ್ಲಿ ಹೀಗೆ ವಿವರಿಸಲಾಗಿದೆ :

ಅಹಂಕಾರಃ ಪ್ರಭುಃ ಸಭ್ಯಾ ವಿಷಯಾ ನರ್ತಕೀ ಮತಿಃ।
ತಾಲಾದಿಧಾರಿಣ್ಯಕ್ಷಾನಿ ದೀಪಃ ಸಾಕ್ಷ್ಯವಭಾಸಕಃ ॥
(೧೦.೧೪)

"ಒಂದು ರಾಜಸಭೆ. ರಾಜನು ಸಿಂಹಾಸನದ ಮೇಲೆ